ಕೇಳಲಾರಂಭಿಸುತ್ತಿದ್ದಂತೆ 'ಮಾಫಿ ಅರಬಿ, ಇಂಗ್ಲಿಷ್ ಪ್ಲೀಸ್' ಅಂದ ದೀಪಕ್.

'ಓಕೆ ಓಕೆ... ಓಲ್ಡನ್ ಡೇಸ್ ಮೈ ಇಂಗ್ಲಿಷ್ ನಾಟ್ ವೆರಿ ಗುಡ್, ನೌ ಓಕೆ. ಯು ಲರ್ನ್ ಅರಬಿ ಸೂನ್' ಎಂದು ಸಲಹೆ ನೀಡಿ ಮಾತುಕತೆಗಿಳಿದ. ದೀಪಕನ ಇಂಗ್ಲಿಷ್ ಕೂಡ ಅಷ್ಟಕ್ಕಷ್ಟೆ. ಆದರೂ ಅರಬಿಯ ಪ್ರಶ್ನೆಗಳಿಗೂ ಇವನ ಉತ್ತರಗಳಿಗೂ ಬೇರೆ ಗತಿಯಿರಲಿಲ್ಲ. ಸಿಮೆಂಟು ಹಾಕದೆ ಕಟ್ಟಡ ಕಟ್ಟುವ ಸರ್ಕಾರೀ ಗುತ್ತಿಗೆದಾರರಂತೆ ಇಬ್ಬರೂ ವ್ಯಾಕರಣವೇ ಇಲ್ಲದ ವಾಕ್ಯಗಳ ನೆರವಿನಲ್ಲಿಯೇ ಮಾತಿಗಿಳಿದರು!

'ಆ ಗಿಡುಗಗಳಿಗೆ ಮುಖಮುಚ್ಚುವ ಕವಚ ಹಾಕಿದೆಯಲ್ಲ, ಅದು ಯಾಕೆ ಗೊತ್ತಾ?' ಕೇಳಿದ ಅರಬಿ.

'ಪರಿಸರದ ಗೊಂದಲಗಳಿಗೆ ಗಿಡುಗಗಳು ಹೆದರುವುದನ್ನು ತಪ್ಪಿಸುವ ಸಲುವಾಗಿ.' ಈ ಸಂದರ್ಶನಕ್ಕಾಗಿಯೇ ಹಿಂದಿನ ರಾತ್ರಿ ಅಂತರ್ಜಾಲ ಜಾಲಾಡಿಸಿದ್ದು ಸಾರ್ಥಕವಾಯಿತು ಅನಿಸಿತು ದೀಪಕನಿಗೆ.

'ಸಾಧಾರಣ ಎಷ್ಟು ಜಾತಿಯ ಗಿಡುಗಗಳಿವೆ?' ಕೇಳಿದ ಅರಬಿ.

'ನನಗೆ ಮೂರ್ನಾಲ್ಕು ಜಾತಿ ಗೊತ್ತು' ಅಂತರ್ಜಾಲ ಜಾಲಾಡಿಸಿದ್ದು ಸಾಕಾಗಲಿಲ್ಲ ಎಂದುಕೊಂಡು ತಲೆಗೆ ಹೊಳೆದ ಉತ್ತರ ನೀಡಿದ ದೀಪಕ್.

ಹೀಗೆಯೇ ನಾಲ್ಕಾರು ಪ್ರಶ್ನೆಗಳನ್ನು ಕೇಳಿದ ಅರಬಿಗೆ ತನಗೆ ಸೂಕ್ತ ಅನಿಸಿದ ಉತ್ತರಕೊಟ್ಟ. ಸರಿಯೋ ತಪ್ಪೋ, ಸಂದರ್ಶನದಲ್ಲಿ ಪ್ರಶ್ನೆಗಳಿಗೆ ತಲೆಕೆಡಿಸಿಕೊಳ್ಳದೆ ಉತ್ತರ ಕೊಡುವುದು ಗಲ್ಫಿನ ನಿಯಮ ಅಂದಿದ್ದರಲ್ಲ ಚಿಕ್ಕಣ್ಣ!

ಕೊನೆಗೊಮ್ಮೆ 'ಅಬ್ದುಲ್ಲಾ' ಎಂದು ಬೊಬ್ಬೆ ಹಾಕಿ ಕೂಗಿದ ಅರಬಿ. ಮನೆಯೊಳಗಿಂದ ಸವಕಲು ಪಠಾಣನೊಬ್ಬ ಹಾಜರಾದ. ಅರಬಿ ಅಬ್ದುಲ್ಲಾನಿಗೆ ಅವರ ಭಾಷೆಯಲ್ಲಿ ಏನೋ ನಿರ್ದೇಶವಿತ್ತ. ಅಬ್ದುಲ್ಲಾ ಮನೆಯೊಳಗೆ ಹೋಗಿ ದೊಡ್ಡ ಚರ್ಮದ ಕೈಕವಚದೊಂದಿಗೆ ಬಂದು ದೀಪಕನ ಬಲಗೈಗೆ ಅದನ್ನು ತೊಡಿಸಿ, ಭದ್ರವಾಗಿ ಕಟ್ಟಿ, ತೋಳನ್ನು ಚಾಚಿ ನಿಲ್ಲಿಸಿ ಹೊರಟು ಹೋದ. ದೀಪಕನಿಗೆ ಮುಂದೇನು ನಡೆಯಲಿದೆ ಎಂದು ಅರಿವಾಯಿತು. ಗಿಡುಗಗಳಲ್ಲೊಂದನ್ನು ತಂದು ತನ್ನ ಕೈಯಲ್ಲಿ ಕೂರಿಸುತ್ತಾನೆ! ಧೈರ್ಯ ಮಾಡಿಕೊಂಡ. ಹಕ್ಕಿಗಳ ಒಡನಾಟ ಇತ್ತು ಎಂದು ಸೀ.ವಿ.ಯಲ್ಲಿ ಬರೆದುಕೊಂಡವನು ತಾನು... ಇದಕ್ಕೆಲ್ಲ ಹೆದರಬಾರದು ಅಂದುಕೊಂಡ. ಅರಬಿ ಪುನಃ 'ಗಾದಾ' ಎಂದು ಕೂಗಿಕೊಂಡ. ಅಲ್ಲೇ ಮರದ ಮೇಲಿಂದ ದೊಡ್ಡದೊಂದು ಗಿಡುಗ ಒಮ್ಮೆಲೆ ಹಾರಿಬಂದು ದೀಪಕನ ಚಾಚಿದ್ದ ಕೈಯಲ್ಲಿ ಲ್ಯಾಂಡ್ ಆಯಿತು. ಅಕಸ್ಮಾತ್ ನಡೆದುಹೋದ ಈ ವಿದ್ಯಮಾನ ಹಾಗೂ ಹಕ್ಕಿಯ ಭಾರದಿಂದ ಸಮತೋಲನ ಕಳೆದುಕೊಂಡು ಇನ್ನೇನು ಬೀಳುವುದರಲ್ಲಿದ್ದ ದೀಪಕ್ ತೋಳನ್ನು ಎಡಗೈಯ ಆಧಾರದೊಂದಿಗೆ ಸಂಭಾಳಿಸಿ ಹಿಡಿದು ಸಾವರಿಸಿಕೊಂಡ. ಕೆಲವೇ ಕ್ಷಣಗಳಲ್ಲಿ ಈತ ಪರಿಚಯವಿಲ್ಲದ ಆಸಾಮಿ ಎಂದು ಪತ್ತೆ ಹಚ್ಚಿದ ಗಿಡುಗ, ಪುನಃ ಕೈಯಿಂದ ಟೇಕಾಫ್ ಮಾಡಿ ಹಾರಿಹೋಗಿ ಛಾವಣಿಯ ಮೇಲೆ ಕುಳಿತುಕೊಂಡಿತು. ಆಗಷ್ಟೇ ಸಾವರಿಸಿಕೊಂಡು ಬ್ಯಾಲೆನ್ಸ್ ಮಾಡಿಕೊಳ್ಳುತ್ತಿದ್ದ ದೀಪಕ್ ಅದರ ಟೇಕಾಫ್ ರಭಸಕ್ಕೆ ನೆಲಕ್ಕೇ ಬಿದ್ದುಬಿಟ್ಟ!

ಗಹಗಹಿಸಿ ನಗುತ್ತ 'ಹೆದರಿಕೊಂಡೆಯಾ?' ಎಂದ ಅರಬಿ.

'ಹಾಗೇನಿಲ್ಲ, ಮುಖಕ್ಕೆ ಇಷ್ಟು ಹತ್ತಿರದಲ್ಲಿ ಹಕ್ಕಿರೆಕ್ಕೆಗಳು ಹೊಡೆದುಕೊಂಡದ್ದು ಇದೇ ಮೊದಲಬಾರಿ' ಎದೆಯಿನ್ನೂ ಡವಡವ ಹೊಡೆದುಕೊಳ್ಳುತ್ತಿದ್ದರೂ ತೋರಿಸಿಕೊಳ್ಳದೆ